Doc-246
T-P-2

R No KRNN 12 19-2-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭ್ರಮದ ಪತ್ರಿಕೆ
First Golden Jubilee Celebrated Paper in The State
** Now in 57 th Year **
'Satyavadi' daily, Mysore 4



ಸ್ವಾಮಿಗಳು, ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರಪರತ ಎಂ. ಎಸ್. ಕೃಷ್ಣರಾವ್ ಬೆಲೆ 5 ಪೈ

ತಿರುಪತಿ ದೇವಾಲಯದ ಹಣದ ಭಾಗ ಕೈಗಾರಿಕೆಗೆ

ವುಡ್‌ಲಾಂಡ್ಸ್ 15 2 74 ರಿಂದ
ಅಮೋಘ 6 ನೇ ವಾರ
ಪ್ರತಿ ದಿನ 3 ಪ್ರದರ್ಶನಗಳು
ಅಮಿಯಾಷ್‌ರವರ ಹಿಂದಿ ಕಲರ್ ಮಹೋನ್ನತ ಚಿತ್ರ
ಅ ಭಿ ಮಾ ನ್
ಪಾತ್ರ – ಅಮಿತಾಬಚ್ಚನ್ ಜಯಬಾದುರಿ ರೇವಿಡ್ ಬಿಂದು
ಬೆಳಗಿನ ಪ್ರದರ್ಶನ 10 30 ಕಪ್ಪು ಬಿಳುಪು

ಅ ಪೆ ರಾ 20 2 74 ರಿಂದ
ನಾನೂ ಬಾಳಬೇಕು
ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ಕಪ್ಪ
ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಪಟ್ಟಣಾರಾಯಣ
ದಿನ 3 ಪ್ರದರ್ಶನಗಳು

ಮೈ ನೂ ರು ಪೈ ಜ್ ಷೋ
ಮೈಸೂರು ದೊಡ್ಡಕೆರೆ ಮೈದಾನದಲ್ಲಿ
ಪ್ರತಿ ದಿನ ಸಂಜೆ 7 ಗಂಟೆಗೆ ಪ್ರವೇಶ ಉಚಿತ
★ ನೃತ್ಯ ★ ಸಂಗೀತ
ಕಂಚೂರಿಲ ಜಾಕ್ಸನ್ ಟ್ರೂಪ್ ★ ಸ್ಟೀಲ್ ಗಿಟಾರ್ಸ್
ಮನರಂಜನೆಗೆ ಕಪ್ಪದೇ ಭೇಟಿಕೊಡಿ

ಏಕರೂಪ ಶಾಸನ

ಮಂಗಳೂರು– ರಾಜ್ಯದ ಎಲ್ಲಾ ಮುನಿಸಿಪಲ್ ಕಾರ್ಪೋರೇಷನ್ನುಗಳಿಗೂ ಅನ್ವಯಿಸುವಂತಹ ಏಕರೂಪದ ಪ್ರತ್ಯೇಕ ಮತ ಸೂದೆಯನ್ನು ಏಪ್ರಿಲ್ ಶಾಸನ ಸಭೆಯಲ್ಲಿ ತರಲಾಗುವುದೆಂದು ಪೌರಾಡಳಿತ ಮಂತ್ರಿ ಶ್ರೀ ಡಿ ಕೆ ನಾಯ್ಕರವರು ಅವರಿಗೆ ಪೌರಸನ್ಮಾನ ಸಮಾರಂಭದಲ್ಲಿ ಹೇಳಿದರು.

ದೇವಾಲಯಗಳ ಮುಳುಗಡೆ

ಕರ್ನೂಲು— ಶ್ರೀಶೈಲ ಜಲ-ವಿದ್ಯುತ್ ಪ್ರಾಜೆಕ್ಟು ನಿರ್ಮಾಣದಲ್ಲಿ ನಾಗಾರ್ಜುನಸಾಗರ ಜಲಾಶಯದ ಗ್ರಾಮಗಳಲ್ಲಿರುವ 126 ದೇವಾಲಯಗಳ ಮುಳುಗಡೆಯಾಗುವುದೆಂದು ಸಮಾಜ ಕಲ್ಯಾಣ ಮಂತ್ರಿ ಹೇಳಿರುವರು.

ಮಾರುತಿ ಕಾರು

ಅಹಮದಾಬಾದು— ಗುಜರಾತು ಭೂಮಿಯ ಮೇಲೆ ಮಾರುತಿ ಕಾರು ಓಡಾಡಲು ಅವಕಾಶ ಕೊಡುವುದಿಲ್ಲವೆಂದು ಜನಸಂಘ ಶಾಖೆಯ ಕಾರ್ಯದರ್ಶಿ ಶ್ರೀ ಗಜೇಂದ್ರಗಡಕರ್ ಪತ್ರಿಕೆಯವರಿಗೆ ತಿಳಿಸಿದರು

ಭಾರತದ ಸ್ತ್ರೀ ಶಾಕಪ

ಬೆಂಗಳೂರು— ಭಾರತ ತಯಾರಿಸಿರುವ ಉಪಗ್ರಹವನ್ನು ಬಹಿರಾಕಾಶಕ್ಕೆ ಹಾರಿಸಿ ಕಿನಲ್ಲಿ ಬಿಡಲಾಗುವುದಂತೆ !

ಪಾರ್ಲಿಮೆಂಟು

ನವದೆಹಲಿ— ಪಾರ್ಲಿಮೆಂಟು ಜಂಟಿ ಅಧಿವೇಶನದಲ್ಲಿ ಅಧ್ಯಕ್ಷ ಶ್ರೀ ಗಿರಿಯವರು ಗಲಾಟೆ ನಡುವೆಯೇ ಭಾಷಣ ಮಾಡಿದರು – ಅವರನ್ನು ಘೇರಾವೋ ಮಾಡಬೇಕೆಂದಿದ್ದ ವಿರೋಧ ಪಕ್ಷಗಳ ಪ್ರಯತ್ನ ಸಾಗಲಿಲ್ಲ – ಕಾಂಗ್ರೆಸ್ ಮತ್ತು ವಿರೋಧ ಪಕ್ಷದವರಲ್ಲಿ ನೂಕಾಟ, ಗಲಾಟೆ ನಡೆಯಿತು – ಸಭಾಕಾರ್ಯಕ್ಕಾಗಲೂ ಅದವು.

ಪಿ ಎಲ್ 480 ರ ಸಾಲ

ನವದೆಹಲಿ ಭಾರತದಲ್ಲಿರುವ ಅಮೇರಿಕಾದ ಪಿ ಎಲ್ 480 ಸಾಲಗಳ ಹಣದಲ್ಲಿ ರೂ. 1664 ಕೋಟಿಯನ್ನು ಕಳೆಯುವ ಒಪ್ಪಂದಕ್ಕೆ ಸಹಿಯಾಯಿತು.

ಡಿ ಎಂ ಕೆ ಯಿಂದ ಖಂಡನೆ

ನವದೆಹಲಿ— ಪ್ರಸ್ತುತ ಆರ್ಥಿಕ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರ ವಿಫಲಗೊಂಡಿರುವುದಕ್ಕಾಗಿ ಡಿ ಎಂ ಕೆ ಪಾರ್ಲಿಮೆಂಟರಿ ತಂಡವು ಖಂಡಿಸಿದೆ

ಫಲಪುಷ್ಪ ಇಲಾಖೆಗೆ ಆದಾಯ

ಮೈಸೂರು— ಮೈಸೂರು ವಿಭಾಗದ ಫಲಪುಷ್ಪ ಇಲಾಖೆಯು, 73–74 ರಲ್ಲಿ ಹೂವು, ಬೀಜ, ಕೃಷಿಕ್ಷೇತ್ರ ಉತ್ಪಾದನೆಗಳನ್ನು ಮಾರಿ ರೂ. 10 ಲಕ್ಷ ಆದಾಯ ಸಂಪಾದಿಸಿದೆ.

ಜಿಲ್ಲಾ ತಾಲ್ಲೂಕು ಪುನರ್ವಿಂಗಡನೆ ಬೇಡ

ಮಂಗಳೂರು— ಈಗಿರುವ ಜಿಲ್ಲಾ ತಾಲ್ಲೂಕುಗಳು ಹೀಗೇ ಇರಲೆಂದೂ, ಪುನರ್ವಿಂಗಡನ ಕಾರ್ಯಕ್ಕೆ ಕೈಹಾಕಬಾರದೆಂದೂ ಇಲ್ಲಿಯ ಪೌರಸಭೆಯು ನಿರ್ಣಯ ಮಾಡಿರುತ್ತದೆ.

ದೇವಸ್ಥಾನದ ಹಣ ಕೈಗಾರಿಕೆಗಳಿಗೆ

ಕೊಡಗು— ತಿರುಪತಿ ದೇವಾಲಯಗಳ ಆದಾಯದಲ್ಲಿ ಒಂದು ಭಾಗವನ್ನು ಕೈಗಾರಿಕೆಗಳಿಗೆ ಉಪಯೋಗಿಸಲು ಒಪ್ಪಿಕೆಯಾಗಿದೆ.

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja puram Mysore

ದಿವ್ಯವಾಣಿ

ಪ್ರಾಣಿಗಳ ಅಹುತಿಗೆ ವೇದದಲ್ಲಿ ಒಂದು ಸ್ಥಾನವಿದೆ ಎಂಬುದನ್ನು ನಾವು ಮನಸ್ಸಿಗೆ ಹಚ್ಚಿಸಿಕೊಳ್ಳಬೇಕಾಗಿಲ್ಲ ; ಅಂತಹ ಬಲಿಯು, ಸತ್ಯ ಅಹಿಂಸೆಗಳೆಂಬ ಮೂಲ ತತ್ವಗಳ ಪರೀಕ್ಷೆಗೆ ನಿಲ್ಲಲಾರದು ಎಂಬುದಷ್ಟೆ ನಾವು ಅರ್ಥ ಮಾಡಿಕೊಂಡರೆ ಸಾಕು.

— ಮಹಾತ್ಮಾ ಗಾಂಧಿ

ಗೋಮಾತೆ

ಭವ್ಯ ತಾಯೆ, ದಿವ್ಯ ತಾಯೆ, ಓ ತಾಯೆ!
ಕಾಯ್ದು ರಕ್ಷಿಸು ನಮ್ಮನು ತಾಯೇ
ಗೋಮಾತೆ ತಾಯೇ, ಪುಣ್ಯ ಬಾಳ್ವೆ ॥
ಓ ಮಾತೆ ಕಾತ್ಯಾಯಿನಿ, ನೀಡು ವರ ಪ್ರದಾಯಿನಿ
ಕ್ಷೇಮ ಕರ್ಮದ ಬೆಳಕನು ಎಲ್ಲೆಡೆ ಸೂಸಿ
ಜನ ಜಂಗುಳಿಯನು ಕಾಯೇ ತಾಯೇ ॥

— ಗಣಪತಿ ಡಿ. ಭಟ್
ಚಿನ್ಮಯಿ

ಕವನ ಮೂರ್ತಿ

ಕಾಡಿನಲ್ಲಿ ಬೆಳೆವ ತೃಣವ
ತಿಂದು ಸುಖದಿ ಜೀವಿಸ
ತರರ ಸುಖಕೇ ಜನ್ಮ ತಾಳಿದ
ತಾಯ ನಾವು ಪೂಜಿಪ ॥ 1 ॥

ನಾಲ್ಕು ಪಾದ ಊರು ನಾಡ ಸೇವೆ
ಗಯ್ವ ಪೂಜ್ಯ ಗೋಮಾತೆ
ನಾಡ ಮಕ್ಕಳೆಲ್ಲಿಗಾಗಿ ತನ್ನ
ಹಿಕವ ಕಡೆಗಣಿಪ ಗೋವೇ ಲೋಕ
ಮಾನತೇ ॥2॥

ತಿನವು ಗೋವ ಪೂಜೆಗೈವ್ವ
ಗೃಹನೇ ದೇವಮಂದಿರ
ಮಾತೆ ಸುಖದಿ ಬಾಳ್ವ ನಾಡು
ಆಡುವೇ ನಿತ್ಯ, ಸುಂದರ ॥ 3 ॥

ಗೋವ ಸೇವೆಗೈವ ನವನೆ
ನಿತ್ಯ ತೃಪ್ತ ತೃಪ್ತನು
ನಿತ್ಯ ಗೋವಿಗನ್ನವೀವ
ಅವನೇ ಜೀವನ್ಮುಕ್ತನು ॥ 4 ॥

ಕಾನುಧೇನು ಸೇವೆಗಯ್ವ
ಗುಂಟೆ ಇಹದ ಬಂಧನ
ಶಾಂತಿಯಿಂದ ನಲಿವ ಅವನ
ಬಾಳ್ವೆ ನಿತ್ಯ ನಂದನ ॥ 5 ॥

ಗೋವ ಹಿಂಸೆ ಗಯ್ವ ನಾಡಿ
ಗುಂಟಿ ಕ್ಷೇಮ ಶಾಂತಿಯು ॥
ಗೋವ ಪೂಜೆ ನೂಡಿರಣ್ಣ
ಅವಳೇ ಧರ್ಮ ಮೂರ್ತಿಯು ॥ 6 ॥

— ಜಿ. ವಿ. ಗಾಂವ್ಕರ್
ಬಾಗಿನಕಟ್ಟೆ

ಹಸ್ಸ ಜೀವ ರಕ್ಷಣೆಗೆ, ಗೋವುಗಳು ಮತ್ತು ಬ್ರಾಹ್ಮಣರ ರಕ್ಷಣೆಗೆ, ಸ್ತ್ರೀಯರ ಪ್ರೇಮ ಸಂಪಾದನೆಗೆ ಬಳಸಿಕೊಳ್ಳಬಹುದು

— ಮನು ಸ್ಮೃತಿ

ಜೈಮಾತೆ, ಗೋಮಾತೆ

ಗೋಮಾತೆಗಭಿನಮಿಸಿ ಮುಂದಡಿಯ ನಿಡಲು
ಫಲ ಸಿದ್ಧಿಯಾಗುವುದು ಎಂದೆಂದು ನಿಜವು
ಆ ನಿಷ್ಠೆ, ಆ ಶ್ರದ್ಧೆಗಳ ಗೋವು ಕೊಡಲು
ಬದುಕೆಹುದು ಬಂಗಾರ ದಿನವು
ಮೈಮನದಿ ಜೈತನ್ಯ ಚೇತರಿಸಿಕೊಳಲು
ಸಾಧನೆಗೆ ಗೆಲುವಾಗ ಗುರಿಯನ್ನು ಕಾಣಲು
ಉತ್ತನು ಮಾಸ್ಯತೆಯ ಹಿಂದಿನಲಿ ನಿಂತಿ
ಹುದು ಅಳಲು
ಛಾಳಿಯಿಡೆ ಸುಖವೆಲ್ಲ ಹೊಳೆಯ ಸಾಲು.
ಖಡವ್ಯಾಪ್ತಿ ಗೋಮಾಂಶ ಇದು ಯಾಕೆ ಊಟಕೆ ?
ಕೊಲ್ಲದಿಹೆ ಕೊಡುತಿದ್ದಳಚ್ಚೀರು ಚಿನ್ನ.
ಇದು ನಿಜಕೂ ಅತಿಯಾಸೆ, ಇದರಿಂದ ಬದುಕೆ
ಹಾಳಾಗಿ ಹೋಗುವನು, ಖಡು ಹತ್ಯೆ ಮುನ್ನ
ಗೋಮಾತೆ ನಮ್ಮೆಲ್ಲ ದೇವತೆಯು ನಿಜಕೂ
ಅದಕಾಣ್ಪ ಕಣ್ ಮಾತ್ರ ಬೇಕು
ಓ ದೇವಿ ನೀಡೆನುಗೆ ಸದ್ಬುದ್ಧಿ ವಿದ್ಯೆಯ
ದಿನವಿರಲಿ ನಿನ್ನ ದಯೆಯೆಮೆಗೆ ಸಾಕು
ನಿನ್ನ ಜನ್ಮದ ಸ್ಥಳವು ಪುಣ್ಯ ಭಾರತದೇಶ
ಸರ್ವದಾ ಸನ್ಮಾನ ನಿನಗಲ್ಲಿ ಸಲ್ಲಲಿ
ಎಂದೆಂದು ನಿನ್ನಿಂದ ತುಂಬಿರಲಿ ಹಿಂದೂ ಕೋಶ
ಜೈಮಾತೆ, ಗೋಮಾತೆ, ಜೈಕಾರ ವಿರಲಿ

— ವಜ್ರಳ್ಳಿ ಗಣಪತಿ ಶರ್ಮಾ

★ ಪಶುಸಂಗೋಪನಾ ಅಭಿವೃದ್ಧಿ ಯೋಜನೆಯನ್ನು ಮೈಸೂರು ಜಿಲ್ಲೆ ಸೇರಿಂತೆ 8 ಜಿಲ್ಲೆಗಳಲ್ಲಿ ಕೈಗೊಳ್ಳಲು ಆಲೋಚಿಸಲಾಗಿದೆಯೆಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ಒಂದು ಭಾಷಣದಲ್ಲಿ ಬಹುಮಾನ ವಿತರಣೆ ಮಾಡುತ್ತಾ ಹೇಳಿದರು.

ಶ್ರೀ ಚಕ್ರೇಶ್ವರ

ತಮಿಳುನಾಡುವಿನಲ್ಲಿಯ ಚಕ್ರಪಳ್ಳಿ ಗ್ರಾಮದಲ್ಲಿ ಶ್ರೀನಾಥನ ಚಕ್ರಪಳ್ಳಿ ಮಹಾದೇಶ್ವರ ದೇವಸ್ಥಾನವಿದೆ ; ಈ ದೇವಾಲಯಕ್ಕೆ ಈ ಹೆಸರು ಬರಲು ಸ್ಥಳಪುರಾಣದಲ್ಲಿ ಎರಡು ವಿಷಯಗಳಿವೆ. ಒಂದು ಸೌರಾಣಿಕ ಪಕ್ಷಿ ಚಕ್ರವಾಳವು ಸ್ವಾಮಿಯನ್ನು ಪೂಜಿಸಿ ಮೋಕ್ಷ ಪಡೆಯಿತು ಎಂಬುದೊಂದಾಗಿದೆ ; ವಿಷ್ಣುವು ಸ್ವಾಮಿಯನ್ನು ಚಕ್ರಾಯುಧ ಪಡೆಯಲು ಪೂಜಿಸಿದನೆಂಬುದು ಎರಡನೆಯದು.

All India Blind Welfare Week

21 st February to 27 February 1974

Flag Day on 26 th February 1974.

Donate generously to the cause of the the Blind

Sponsored by :

Sri sri Bijoy Krishna Ashram Relief Society [Regd]
Netaji Eye & General Hospital
P. O Ramachandrapur Ashram, Dist. Purulia (W. Bengal)

ಭಾರತದಲ್ಲಿ ಗೋವಧೆ
ಪೂರ್ಣ ನಿಶೇಧವಾಗಲಿ

SHAKTI

A Superb Tonic

Contribute Liberally to the National Defence Fund

Help The Gorakshana

— HumanitarianPropoganda Monthly —

Protect the Cow

Quality Printing Neat Binding

Lakshminarasimha Press

Sivarampet, Mysore 1